"ಸಾಮಾಜಿಕ ಭದ್ರತೆ ಯೋಜನೆ"

4113(4876); ಡಾ॥ ರಫೀಕ್ ಅಹ್ಮದ್ ಎಸ್ (ತುಮಕೂರ ನಗರ)

ಅ) ತುಮಕೂರು ನಗರ ವಿಧಾನಸಭಾ ಕ್ಷೇತ್ರದಲ್ಲಿ ಸಾಮಾಜಿಕ ಭದ್ರತಾ ಯೋಜನೆಯ ವಿವಿಧ ಯೋಜನೆಗಳಡಿಯಲ್ಲಿ ಸೌಲಭ್ಯ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು (ವಿವರ ನೀಡುವುದು)

ಆ) ಕಳೆದ 2 ವರ್ಷಗಳಿಂದ ಸೌಲಭ್ಯವನ್ನು ಪಡೆಯಲು ಬಂದಿರುವ ಅರ್ಹ ಅರ್ಜಿಗಳೆಷ್ಟು;

ಇ) ಬಾಕಿ ಉಳಿದಿರುವ ಅರ್ಜಿಗಳೆಷ್ಟು (ವಿವರ ನೀಡುವುದು)

ಈ) ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಜಿ ಸಲ್ಲಿಸಿದ ಅರ್ಹ ಫಲಾನುಭವಿಗಳಿಗೆ ವಿಳಂಬವಿಲ್ಲದೆ ಸೌಲಭ್ಯವನ್ನು ಮಂಜೂರು ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) ತುಮಕೂರು ನಗರ ವಿಧಾನಸಭಾ ಕ್ಷೇತ್ರದಲ್ಲಿ ಸಾಮಾಜಿಕ ಭದ್ರತಾ ಯೋಜನೆಯ ವಿವಿಧ ಯೋಜನೆಗಳಡಿಯಲ್ಲಿ ಒಟ್ಟು 16171 ಫಲಾನುಭವಿಗಳು ಸೌಲಭ್ಯ ಪಡೆಯುತ್ತಿದ್ದು, ಯೋಜನಾವಾರು ವಿವರ ಕೆಳಕಂಡಂತಿದೆ.

ವೃದ್ಧಾಪ್ಯ ವೇತನ	ವಿಧವಾ ವೇತನ	ಅಂಗವಿಕಲ ವೇತನ	ಸಂಧ್ಯಾ ಸುರಕ್ಷಾ ವೇತನ	ಮನಸ್ವಿನಿ	ಮೈತ್ರಿ
938	3817	2583	7280	1549	4

ಆ) ಕಳೆದ ಎರಡು ವರ್ಷಗಳಲ್ಲಿ ಸೌಲಭ್ಯ ಕೋರಿ ಬಂದಿರುವ ಅರ್ಹ ಅರ್ಜಿಗಳ ವಿವರ ಕೆಳಕಂಡಂತಿದೆ.

ವೃದ್ಧಾಪ್ಯ ವೇತನ	ವಿಧವಾ ವೇತನ	ಅಂಗವಿಕಲ ವೇತನ	ಸಂಧ್ಯಾ ಸುರಕ್ಷಾ ವೇತನ	ಮನಸ್ವಿನಿ	ಮೈತ್ರಿ
200	1498	817	2372	199	4

ಇ) ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಬಾಕಿ ಉಳಿದಿರುವ ಅರ್ಜಿಗಳ ಯೋಜನಾವಾರು ವಿವರ ಕೆಳಕಂಡಂತಿದೆ.

ವೃದ್ಧಾಪ್ಯ ವೇತನ	ವಿಧವಾ ವೇತನ	ಅಂಗವಿಕಲ ವೇತನ	ಸಂಧ್ಯಾ ಸುರಕ್ಷಾ ವೇತನ	ಮನಸ್ವಿನಿ	ಮೈತ್ರಿ
6	293	159	605	101	0

ಈ) ಸಾಮಾಜಿಕ ಭದ್ರತೆ ಯೋಜನೆಗಳಡಿ ಅರ್ಜಿದಾರರಿಗೆ ವಿಳಂಬವಿಲ್ಲದೆ ಸೌಲಭ್ಯ ನೀಡುವ ನಿಟ್ಟಿನಲ್ಲಿ ವೃದ್ಧಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನ ಹಾಗೂ ಸಂಧ್ಯಾ ಸುರಕ್ಷಾ ವೇತನ ಯೋಜನೆಗಳನ್ನು "ಸಕಾಲ" ಸೇವೆಗಳಡಿ ತರಲಾಗಿದ್ದು, ಅರ್ಜಿ ಸಲ್ಲಿಸಿದ 70 ದಿನಗಳೊಳಗಾಗಿ ವಿಲೇವಾರಿ ಮಾಡಲಾಗುತ್ತಿದೆ. ಮನಸ್ವಿನಿ ಹಾಗೂ ಮೈತ್ರಿ ಯೋಜನೆಗಳು ಹೊಸ ಯೋಜನೆಗಳಾದ್ದು ಅರ್ಜಿಗಳ ತ್ವರಿತ ವಿಲೇವಾರಿ ಮಾಡಲಾಗುತ್ತಿದೆ.

ಜಿಲ್ಲಾ ಕ್ರೀಡಾಂಗಣಗಳ ಅಭಿವೃದ್ಧಿ

4114(4457); ಡಾ॥ ಶಿವರಾಜ್ ಪಾಟೀಲ್ ಎಸ್. (ರಾಯಚೂರು ನಗರ)

ಅ) ರಾಜ್ಯದಲ್ಲಿರುವ ಜಿಲ್ಲಾ ಕ್ರೀಡಾಂಗಣಗಳು ಹಾನಿಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಕ್ರೀಡಾಂಗಣಗಳ ದುರಸ್ತಿಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು (ಜಿಲ್ಲಾವಾರು ವಿವರ ನೀಡುವುದು);